ಶ್ರೀ ಡಿ. ಬಸವಣ್ಣಪ್ಪ.—ಪಾಲಸಿ ಏನೂ ಇಲ್ಲ. ಎಲ್ಲಿ 15 ಸಾವಿರ ಜನ ಸಂಖ್ಯೆ ಇದ್ದು ಅಲ್ಲಿ ಯಾವ ತರದ ಆಸ್ಪತ್ರೆ ಇಲ್ಲದಿದ್ದರೆ, ಅಲ್ಲಿ ಇದನ್ನು ಮಾಡಬಹುದು. ಅಲ್ಲಿ ಆಯುರ್ವೇದ ಟ್ರೈಪಿನ ಡಿಸ್ಪೆನ್ಸರಿ ಇದ್ದುದರಿಂದ, ಜನರಿಗೆ ಸೌಕರ್ಯ ಇರುವುದರಿಂದ ಇದು ಮಾಡುವುದಿಲ್ಲ, ಅಷ್ಟೆ.

ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ.—ಈಗ ನೆಲ್ಲಿಕಾರ್ ಗ್ರಾಮದಲ್ಲಿ 15 ಸಾವಿರ ಜನ ಸಂಖ್ಯೆ ಇಲ್ಲವೇ ?

ಶ್ರೀ ಬೋಳ ರಘುರಾಮಶೆಟ್ಟಿ.—ಸ್ಯಾಮಿ, ಕಲ್ಲಮುಂಡ್ಕರ್ ಗ್ರಾಮದ್ದನ್ನು ರದ್ದು ಮಾಡಬೇಕೆಂದು ತಾಲೂಕು ಬೋರ್ಡಿನವರು ಠರಾವು ಮಾಡಿ ಸರ್ಕಾರಕ್ಕೆ ಕಳುಹಿಸಿದ್ದಾರೆಯೇ ?

ಶ್ರೀ ಡಿ. ಬಸವಣ್ಣಪ್ಪ.—ಈಗ ಹೆರ್ಬ್ ಯೂನಿಟ್ ಟ್ರೈಪ್ ಡಿಸ್ಪೆನ್ಸರಿ ಬೇಕೆಂದು ಬೇಕಾದಷ್ಟು ಪ್ರಪೊಸರ್ಸ್ ಸರ್ಕಾರದ ಮುಂದೆ ಇದೆ. ನಾನು ಮೊದಲೇ ಹೇಳಿದೆ, ಎಲ್ಲಿ ವೈದ್ಯಕೀಯ ಸೌಲಭ್ಯ ಇದೆಯೋ, ಅಲ್ಲಿ ಒದಗಿಸಲಾಗುವುದಿಲ್ಲ. ಎಲ್ಲಿ ಇಲ್ಲವೋ, ಅದನ್ನು ತಕ್ಷಣ ಪರಿಶೀಲಿಸಿ ಅದಕ್ಕೆ ಆದ್ಯತೆ ಕೊಡಲಾಗುತ್ತದೆ.

Conference of Chief Ministers and Ministers for Co-operation of States

79. **Sri D. B. KALMANKAR** (Aland).—

Will the Minister for Development be pleased to state :—

(*a*) whether any conference of the Chief Ministers and Ministers for Co operations of States took place at Madras on 12th June 1968 ;

(*b*) the problems discussed and the concrete decisions that were taken in the said conference ?

A.—**Sri B. L. GOWDA** (Deputy Minister for Co-operation).—

(*a*) Yes.

(*b*) 1. The Conference was convened to consider the future policy to be adopted in regard to Community Development and Panchayati Raj and Co-operation.

2. The concrete decisions that were taken in the conference are laid on the Table of the House *

12-30 P.M.

Sri D. B. KALMANKAR.—What is the criterion applied to know that a particular person is a small holder ?

†**Sri B. L. GOWDA.**—A person holding less than 2 acres is a small holder.

ಶ್ರೀ ಸಿದ್ಧಯ ಕಾಶೀಮಠ್.—ಈ ಸಮ್ಮೇಳನದಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಬೇಕನ್ನುವುದರ ಬಗ್ಗೆ ನಿರ್ಣಯವಾದಮೇಲೆ ನೀವೇನಾದರೂ ನಿರ್ಣಯವನ್ನು ತೆಗೆದುಕೊಂಡಿದ್ದೀರಾ ?

ಶ್ರೀ ಬಿ. ಎಲ್. ಗೌಡ.—ಅಭಿವೃದ್ಧಿ ಯೋಜನೆಗಳನ್ನು ಇನ್ನೂ ಹೆಚ್ಚಿಗೆ ಮಾಡುವ ಉದ್ದೇಶದಿಂದ ಅವುಗಳನ್ನು ಮುಂದುವರಿಸಲಾಗುತ್ತಿದೆ.

---

*Copy placed in the Mysore Legislature Library *vide* No. 5, dated 9th September 1968.

ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ.—ರಾಷ್ಟ್ರೀಯ ಅಭಿವೃದ್ಧಿ ಯೋಜನೆಗಳನ್ನು ವಜಾ ಮಾಡ ಬೇಕು, ಇದರಿಂದ ಸಿಕ್ಕಾಪಟ್ಟೆ ಸರ್ಕಾರದ ಹಣ ಖರ್ಚಾಗುತ್ತಿದೆ, ಇದೊಂದು ಸರ್ಕಾರಕ್ಕೆ ದೊಡ್ಡ ಹೊರೆಯೆಂದು ಅನೇಕ ಸಂಸ್ಥಾನಗಳ ಮುಖ್ಯ ಮಂತ್ರಿಗಳು ಹೇಳಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಬಿ. ಎಲ್. ಗೌಡ.—ರಾಜ್ಯ ಸರ್ಕಾರಗಳ ಮುಖ್ಯ ಮಂತ್ರಿಗಳು ಮತ್ತು ಅಭಿವೃದ್ಧಿ ಯೋಜನೆಯ ಅಧಿಕಾರಿಗಳು ಅಲ್ಲಿಗೆ ಹೋಗಿದ್ದರು. ಅವರು ಅಲ್ಲ ಕಾರ್ಯ ನೀತಿಯನ್ನು ಪರಿಶೀಲಿಸಿ ದ್ದಾರೆ.

ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ.—ಅಭಿವೃದ್ಧಿ ಯೋಜನೆಗಳ ಬಗ್ಗೆ ಎವ್ಯಾಲ್ಯುಯೇಷನ್ ನಮ್ಮ ದೇಶದಲ್ಲಿ ಆಗಿದೆಯೇ ?

ಶ್ರೀ ಬಿ. ಎಲ್. ಗೌಡ.—ಎವ್ಯಾಲ್ಯುಯೇಷನ್ ಬಗ್ಗೆ ಬೇರೆ ಪ್ರಶ್ನೆ ಹಾಕಿದರೆ ಉತ್ತರ ಹೇಳು ತ್ತೇನೆ.

ಶ್ರೀ ಜಿ. ರಾಮೇಗೌಡ.—ಮದ್ರಾಸಿನಲ್ಲಿ ನಡೆದಂಥ ರಾಜ್ಯ ಮುಖ್ಯ ಮಂತ್ರಿಗಳ ಸಮ್ಮೇಳನದಲ್ಲಿ ಸಹಕಾರ ಸಂಘಗಳಲ್ಲಿ ಅಧ್ಯಕ್ಷರ ವಿಚಾರವಾಗಿ ಏನಾದರೂ ತೀರ್ಮಾನ ತೆಗೆದುಕೊಂಡಿದ್ದಾರೆಯೇ ?

ಶ್ರೀ ಬಿ. ಎಲ್. ಗೌಡ.—ಅಲ್ಲಿ ನಡೆದಂಥ ಸಮ್ಮೇಳನದಲ್ಲಿ ಸಹಕಾರ ಸಂಘಗಳಲ್ಲಿ ಖಾಯಂ ಆಗಿ ಎರಡು ವರ್ಷಗಳು ಒಬ್ಬರೇ ಅಧ್ಯಕ್ಷರು ಇರದಾರದು, ಅವರು ಒಂದಕ್ಕಿಂತ ಹೆಚ್ಚು ಸಹಕಾರ ಸಂಘಗಳಲ್ಲಿ ಅಧ್ಯಕ್ಷರಾಗಿ ಇರದಾರದೆಂದು ಮಾಡಿರುವ ಶಿಫಾರಸ್ಸನ್ನು ಪರಿಶೀಲನೆ ಮಾಡುತ್ತಿದ್ದಾರೆ. ಅದರ ಬಗ್ಗೆ ಇನ್ನೂ ತೀರ್ಮಾನ ತೆಗೆದುಕೊಳ್ಳಲಲ್ಲ.

Sri J. P. SARWESH.—May I know why the issue of delimitation of Taluk Board constituencies was not discussed particularly when it is said that this should not be left to the officials who are afraid to act freely and independently ?

Sri B. L. GOWDA.—It does not pertain to this question.

Sri J. P. SARWESH.—Was this question taken up ?

Sri B. L. GOWDA.—No decision is taken regarding this in that conference.

ಶ್ರೀ ಕೆ. ಎಚ್. ಪಾಟೀಲ್.—ಮದ್ರಾಸ್‌ನಲ್ಲಿ ನಡೆದಂಥ ಸಮ್ಮೇಳನದಲ್ಲಿ ಸಹಕಾರ ಸಂಘಗಳಲ್ಲಿ ಎರಡು ವರ್ಷ ಸರ್ವಿಸ್ ಆದಮೇಲೆ ಅವರನ್ನು ನಿವೃತ್ತಿ ಮಾಡಬೇಕೆಂದು ತೀರ್ಮಾನ ಮಾಡಿದ್ದಾ ರೆಂದು ಹೇಳಿದ್ದೀರಿ. ಅಂದಮೇಲೆ ಅಂತಹ ಅಧ್ಯಕ್ಷರಿಗೆ ನಿವೃತ್ತಿ ವೇತನವನ್ನು ಕೊಡುವುದನ್ನು ಸರ್ಕಾರದವರು ಪರಿಶೀಲಿಸುತ್ತಾರೆಯೇ ?

ಶ್ರೀ ಬಿ. ಎಲ್. ಗೌಡ.—ಅದನ್ನು ಇನ್ನೂ ಸರ್ಕಾರ ಪರ್ಯಾಲೋಚನೆ ಮಾಡುತ್ತಿದೆ. ಅದರ ಬಗ್ಗೆ ಇನ್ನೂ ಏನೂ ತೀರ್ಮಾನ ತೆಗೆದುಕೊಂಡಿಲ್ಲ.

Private School in Gajendragad

80. Sri S. S. SHETTAR (Hubli).—

Will the Minister for Education be pleased to state :—

(*a*) whether private Schools in Gajendragad, Dharwar District have been taken over by the District School Board, Dharwar ;